## ಗಲ್ಲು

ನ್ಯಾಯಾಧೀಶ: ನಿನ್ನ ಅಪರಾಧ ಸಾಬೀತಾಗಿದೆ. ನಾಳೆ ಬೆಳಿಗ್ಗೆ ನಿನ್ನನ್ನು ಗಲ್ಲಿಗೇರಿಸಲಾಗುತ್ತದೆ.
ಗುಂಡ: ಮತ್ತೆ ಗಲ್ಲಿನಿಂದ ಇಳಿಸೋದು ಯಾವಾಗ?

★★★

## ಹುಡ್ಗ ಏನು ಮಾಡ್ತಾ ಇದಾನೆ?

ಆಂಟಿ: ಏನಮ್ಮಾ ರಾಣಿ ನಿನ್ನ ಮದುವೆ ಆಯಿತಾ?
ರಾಣಿ: ಕಳೆದ ತಿಂಗಳು ಆಯಿತು ಆಂಟಿ.
ಆಂಟಿ: ಹುಡುಗ ಏನು ಮಾಡ್ತಾ ಇದಾನಮ್ಮಾ?
ರಾಣಿ: ಪಶ್ಚಾತ್ತಾಪ ಪಡ್ತಾ ಇದಾನೆ ಆಂಟಿ.

★★★

## ಪರೀಕ್ಷೆ

ಅಂಕಲ್: ಏನೋ ಗುಂಡ ಪರೀಕ್ಷೆಗೆ ತಯಾರಿ ಹೇಗೆ ನಡೀತಾ ಇದೆ?
ಗುಂಡ: ಎಲ್ಲಾ ತಯಾರಿ ಆಗಿದೆ ಅಂಕಲ್. ಓದುವುದೊಂದೇ ಬಾಕಿ.

★★★

## ಮದುವೆಗೂ ಸಾಲ!

ಬ್ಯಾಂಕ್ ಮ್ಯಾನೇಜರ್: ರೀ ಗುಂಡ ನೀವು ನಾಳೆಯೊಳಗೆ ಸಾಲ ತೀರಿಸದಿದ್ರೆ ನಿಮ್ಮ ಕಾರನ್ನು ತೆಗೆದುಕೊಂಡು ಹೋಗ್ತೀವಿ.
ಗುಂಡ: ಅರೆ ಹೌದಾ ಸಾರ್? ಹೀಗೆಂತ ಮೊದಲೇ ಗೊತ್ತಿದ್ರೆ ನನ್ನ ಮದುವೆಗೂ ಸಾಲ ಮಾಡ್ತಿದ್ದೆ.

★★★

## ನ್ಯುಮೋನಿಯಾ

ವೈದ್ಯ: ನಿಮಗೆ ಎಂದಾದರೂ ನ್ಯುಮೋನಿಯಾದಿಂದ ತೊಂದರೆ ಆಗಿತ್ತಾ?
ಗುಂಡ: ಹೌದು ಡಾಕ್ಟ್ರೇ ಆಗಿತ್ತು.
ವೈದ್ಯ: ಯಾವಾಗ?
ಗುಂಡ: ನಮ್ಮ ಟೀಚರ್ ಅದರ ಸ್ಪೆಲ್ಲಿಂಗ್ ಕೇಳಿದಾಗ.

★★★

## ಅತ್ತೆ-ಸೊಸೆ

ಗೆಳೆಯ: ಹೆಂಗಸರ ಬದುಕಿನಲ್ಲಿ ಎದುರಾಗುವ ಅತಿ ದೊಡ್ಡ ಸಮಸ್ಯೆ ಯಾವುದು?
ಗುಂಡ: ಸೊಸೆಯಾದಾಗ ಒಳ್ಳೆಯ ಅತ್ತೆ ಸಿಗದಿರುವುದು ನಂತರ ಆಕೆ ಅತ್ತೆಯಾದಾಗ ಒಳ್ಳೆಯ ಸೊಸೆ ದೊರಕದಿರುವುದು.

★★★

## ಆಸ್ತಿ ಮುಖ್ಯ

ರಾಯರು: ಒಂದು ಕಡೆ ಅಪ್ಪ ಅಮ್ಮ ಇನ್ನೊಂದು ಕಡೆ ಅತ್ತೆ ಮಾವ. ಇವರಲ್ಲಿ ನಿಮಗೆ ಯಾರು ಹೆಚ್ಚು ಯಾರು ಕಡಿಮೆ?
ಗುಂಡ: ಉತ್ತರ ಅವರವರ ಆಸ್ತಿ ವಿವರಗಳ ಮೇಲೆ ಅವಲಂಬಿತವಾಗಿದೆ.

★★★



## ಎಣ್ಣೆ

ಹೆಂಡತಿ: ರೀ ಇವತ್ತು ಹಬ್ಬ ನೆನಪಿದೆ ತಾನೆ? ಎಣ್ಣೆ ಹಾಕಿಕೊಂಡು ಸ್ನಾನ ಮಾಡಬೇಕು. ಏಳ್ರೀ ಬೇಗ.
ಗುಂಡ: ಅಯ್ಯೋ ಸುಮ್ಮನಿರೆ! ಇಷ್ಟು ಬೇಗ ಯಾವ ಬಾರ್ ಕೂಡ ತೆರೆದಿರುವುದಿಲ್ಲ.

## ಬುದ್ಧಿ

ಮಗ: ಅಪ್ಪಾ ನನಗೆ ಬುದ್ಧಿ ಎಲ್ಲಿಂದ ಬಂತು?
ತಂದೆ: ನಿಮ್ಮಮ್ಮನಿಂದಲೇ ಬಂದಿರಬೇಕು.
ಮಗ: ಅದು ಹೇಗೆ ಹೇಳ್ತೀಯಾ?
ತಂದೆ: ಹೇಗೆ ಅಂದ್ರೆ ನನ್ನ ಬುದ್ಧಿ ನೆಟ್ಟಗಿದೆ.

★★★

## ತೆಗೆದು-ಹಾಕುವುದು

ಗೆಳೆಯ: ಮದ್ಯ ಸೇವನೆ ತಪ್ಪು ಎನ್ನುತ್ತಿರುವಾಗ ಬಾರ್‌ಗಳನ್ನು ತೆಗೆದುಹಾಕುವುದು ಒಳ್ಳೆಯದಲ್ಲವೇ?
ಗುಂಡ: ಪ್ರತಿದಿನ ಮಾಡುತ್ತಿರುವುದು ಅದನ್ನೇ ತಾನೇ? ಬೆಳಿಗ್ಗೆ ತೆಗೆಯುತ್ತಾರೆ, ರಾತ್ರಿ ಮುಚ್ಚುತ್ತಾರೆ.

★★★

## ನಾಯಿಗಳ ಮಾತು

ಒಂದು ನಾಯಿ(ಕೊರೊನಾ ಸಮಯದಲ್ಲಿ): ಇದೇನಿದು ರಸ್ತೆಯಲ್ಲಿ ಒಬ್ಬ ಮನುಷ್ಯನೂ ಕಾಣಿಸುತ್ತಿಲ್ಲವಲ್ಲ?
ಇನ್ನೊಂದು ನಾಯಿ: ಎಲ್ಲೋ ಬಿಬಿಎಂಪಿಯವರು ಹಿಡಿದುಕೊಂಡು ಹೋಗಿರಬೇಕು.

(ಸಂಗ್ರಹ) ಎಂ.ಕೆ. ಮಂಜುನಾಥ್, ಬೆಂಗಳೂರು



ಆರೋಗ್ಯಕರವಾದ ಸವಿಯನ್ನು ಆನಂದಿಸಿ
Along with HERBS
100% NATURAL
ARECA TEA
ಆರೋಗ್ಯಕರ • ರುಚಿಕರ • ಉಲ್ಲಾಸಕರ


ಪ್ರಮೋಟರ್ಸ್: ಗ್ರೀನ್ ರೆಮೆಡೀಸ್, ಉಡುಪಿ
+91 820 252 9023
ಕಸ್ಟಮರ್ ಕೇರ್ ನಂ:
+91 80 2672 6337 / +91 63610 08174
ಇ ಮೇಲ್: arecatea@gmail.com
ಅರೇಕಾ ಟೀಯನ್ನು
www.arecatea.in ನಲ್ಲಿ ಖರೀದಿಸಿ
ಆನ್‌ಲೈನ್ ನಲ್ಲಿ ಖರೀದಿಸಿ amazon